ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ 9ನೇ ಮೇ 1998 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಮಧ್ಯಾಹ್ನ 10 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು ಪೀಠದಲ್ಲಿ ಉಪಸ್ಥಿತರಿದ್ದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

ಸದನದಲ್ಲಿ ಆಡಳಿತ ಪಕ್ಷದ ಸದಸ್ಯರ ಗೈರು ಹಾಜರಿ ಕುರಿತು

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಇದೆಯೋ ಹೇಗೋ ತಿಳಿಯುತ್ತಿಲ್ಲ; ನಾವು ಸಮಯಕ್ಕೆ ಸರಿಯಾಗಿ ಸದನಕ್ಕೆ ಆಗಮಿಸಿದ್ದೇವೆ. ಆಡಳಿತಪಕ್ಷದ ಕಡೆ ಕೇವಲ 6 ಜನ ಸದಸ್ಯರು ಮಾತ್ರ ಇದ್ದಾರೆ. ನಿಜವಾಗಿಯೂ ಇದು ಸರಿಯಲ್ಲ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜರವರೆ, ನೀವು ಇವತ್ತು ಬಹಳ ತಡವಾಗಿ ಸದನಕ್ಕೆ ಬಂದಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಆ ರೀತಿ ಎಲ್ಲಾದರೂ ಉಂಟೆ? ನಾನು ಸಮಯಕ್ಕೆ ಸರಿಯಾಗಿ ಆಗಮಿಸಿದ್ದೇನೆ. ನಿಮ್ಮ ಕಾರ್ಯಾಲಯಕ್ಕೆ ನೀವು ಬರುವುದಕ್ಕೆ ಮುಂಚೆಯೇ ನಾನು ಇಲ್ಲಿಗೆ ಬಂದಿದ್ದೇನೆ.

ಅಧ್ಯಕ್ಷರು : ನಿಮ್ಮ ಜೊತೆಗೆ ಈ ದಿಸೆಯಲ್ಲಿ ಮಾತನಾಡಲು ಸಾಧ್ಯವಾಗುವುದಿಲ್ಲ ಬಿಡಿ. ನಾನು ತೇಲಿಸಿ ಹೇಳುವವರನ್ನು ನೋಡಿದ್ದೇನೆ. ಇಷ್ಟು ನೇರವಾಗಿ ಹೇಳುವವರನ್ನು ನಾನು ನೋಡಿಯೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಒಳಗಡೆ ಬರುವುದಕ್ಕೆ ಮುಂಚೆಯೇ ನಾನು ಇಲ್ಲಿಗೆ ಬಂದಿದ್ದೇನೆ; ಎಂಬುದು ನನ್ನ ಮಾತಿನ ಅರ್ಥ. ಆ ಮಾತು ನಿಜ. ಆಡಳಿತ ಪಕ್ಷದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಗೈರು ಹಾಜರಿ ವಿಷಯ ಹಾಸ್ಯವಾಗಿ ತೆಗೆದುಕೊಳ್ಳತಕ್ಕದ್ದಲ್ಲ. ಈ ಸದನದಲ್ಲಿ ನಾವು ಈ ಬಗ್ಗೆ ಎಷ್ಟು ಸಾರಿ ತಮ್ಮಲ್ಲಿ ದೂರಿದ್ದೇವೆ. ಯಾವಾಗ ಅಂದರೆ ಆಗ ಈ ಸದನಕ್ಕೆ ಬರುವುದಕ್ಕೆ ಇದು ಸಂತೆ ಕೆಟ್ಟುಹೋಯಿತೆ. ಮಾನ್ಯ ಕೃಷಿ ಸಚಿವರು ಶಾಸಕರ ದಂಡು ಬರುತ್ತಾ ಇದೆ ಎಂದು ಹೇಳುತ್ತಿದ್ದಾರೆ. ಈ ದಂಡು ಎಲ್ಲಿ ಬರುತ್ತಿದೆ. ನನಗಂತೂ ಕಾಣುತ್ತಿಲ್ಲ. ಮಾನ್ಯ ಬೈರೇಗೌಡರೆ ನಮ್ಮ ಕಡೆ ಎಲ್ಲಾ ಸೇರಿದರೂ 12 ಜನ ಮೀರುತ್ತಿಲ್ಲ. 'ದಂಡು' ಎಂದು ನೀವು ಹೇಳುತ್ತಿದ್ದೀರಲ್ಲ, ಇದು ನಿಜವಾಗಿಯೂ ನಾಚಿಕೆ ಪಡತಕ್ಕ ವಿಷಯ. ಇದು ಲಘುವಾಗಿ ತೆಗೆದುಕೊಳ್ಳತಕ್ಕದ್ದಲ್ಲ. ಈ ಸದನಕ್ಕೆ ಗೌರವ ಬೆಲೆ

ಬೇಡವೇ? ನಾವು ಏಕೆ ಇಲ್ಲಿ ಸದನವನ್ನು ನಡೆಸಬೇಕು. ಸದನದಲ್ಲಿ ಆಯವ್ಯಯ ಮಂಡನೆ ಮಾಡಿ, ಬೇಡಿಕೆಯ ಬಗ್ಗೆ ಚರ್ಚೆ ಇರುವಾಗ ಕೇವಲ 4 ಜನ ಮಂತ್ರಿಗಳು, 12 ಜನ ಶಾಸಕರು ಮಾತ್ರ ಆಡಳಿತ ಪಕ್ಷದ ಕಡೆ ಹಾಜರಿದ್ದರೆ, ಇದಕ್ಕೆ ಏನು ಬೆಲೆ ಬೇಡವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಕನಿಷ್ಟ ಪಕ್ಷ ಕೋರಂ ಆಗುವಷ್ಟು ಸದಸ್ಯರಾದರೂ ಕೂಡ ಸರ್ಕಾರದ ಕಡೆಯಿಂದ ಇರಲಿಲ್ಲ ಎನ್ನುವುದಾದರೆ ಈ ಸದನವನ್ನು ಹೇಗೆ ನಡೆಸಬೇಕು? ಈ ಬಗ್ಗೆ ಎಷ್ಟು ಸಾರಿ ಹೇಳುವುದು. ಒಂದೆರಡು ಬಾರಿಯಾದರೆ ನಾವು ಹೇಳಬಹುದು. ಕನಿಷ್ಟ ಪಕ್ಷ ಮಂತ್ರಿಗಳಾದರೂ ಸದನದಲ್ಲಿ ಹಾಜರಿರಬೇಕಲ್ಲವೇ? ಇಲ್ಲಿ ಇರುವ 40 ಜನ ಮಂತ್ರಿಗಳಲ್ಲಿ ಕನಿಷ್ಟ 20 ಜನ ಮಂತ್ರಿಗಳಾದರೂ ಸದನಕ್ಕೆ ಹಾಜರಾಗುವುದಿಲ್ಲ ಎಂದರೆ ಏನು ಅರ್ಥ. ಸದಸ್ಯರು ಇಲ್ಲ, ಮಂತ್ರಿಗಳು ಇಲ್ಲ, ನಾವು ಇನ್ನಾರಿಗೆ ಕೇಳಬೇಕು. ಮತ್ತೆ ಏಕೆ ಸದನವನ್ನು ನಡೆಸಬೇಕು. ಇದಕ್ಕಿಂತ ಉತ್ತಮವಾದ ಕೆಲಸ ಯಾವುದು ಆಗಬಹುದು, ಎಂದರೆ ನಾವು ದಿನ ಒಂದು ಅಪ್ಲಿಕೇಷನ್‌ನ್ನು ಕೊಡುತ್ತೇವೆ ಅಥವಾ ಮೆಮೋರ್ಯಾಂಡಮ್‌ನ್ನು ಕೊಡುತ್ತೇವೆ. ಅದರ ಮೇಲೆ ಅವರು ಆರ್ಡರನ್ನು ಪಾಸ್ ಮಾಡಲಿ. ಈ ವಿಧಾನಸಭೆ ಬೇಕಾಗಿಲ್ಲ. ಅಧ್ಯಕ್ಷರು ಬೇಕಾಗಿಲ್ಲ, ವಿರೋಧಪಕ್ಷದ ನಾಯಕರು ಬೇಕಾಗಿಲ್ಲ, ಮಂತ್ರಿಗಳು ಬೇಕಾಗಿಲ್ಲ, ಇವರೆಲ್ಲ ಏತಕ್ಕೆ ಬೇಕು? ಇಂತಹ ಪರಿಸ್ಥಿತಿಯನ್ನು ಎಲ್ಲಾ ನೋಡಿಕೊಂಡು ಬಹಳ ಜನ ಅಧ್ಯಕ್ಷೀಯ ಮಾದರಿ ಸರ್ಕಾರ ಇರಬೇಕೆಂದು ಹೇಳುತ್ತಿದ್ದಾರೋ ಏನೋ ನನಗೆ ಗೊತ್ತಿಲ್ಲ. ಪ್ರಜಾಪ್ರಭುತ್ವ ಪದ್ಧತಿ ವಿಫಲವಾಗುತ್ತಿದೆ. ಅದಕ್ಕಾಗಿ ಅಧ್ಯಕ್ಷೀಯ ಮಾದರಿ ಸರ್ಕಾರ ತಂದರೆ ಬಹಳ ಒಳ್ಳೆಯದು. ಈ ಪದ್ಧತಿಯಲ್ಲಿ ಕನಿಷ್ಟ ಪಕ್ಷ ಒಬ್ಬರಾದರೂ ಹೇಳಿದ್ದಾದರೂ ನಡೆಯುತ್ತದೆಂದು ಭಾವಿಸಿ ಬಹಳ ಜನ ಈ ಕಡೆ ಒಲವನ್ನು ತೋರಿಸುತ್ತಾ ಇದ್ದಾರೆ.

ಅಧ್ಯಕ್ಷರು : ಕೆಲವು ಮಂತ್ರಿಗಳು ನನ್ನ ಅನುಮತಿಯನ್ನು ಪಡೆದು ಗೈರು ಹಾಜರಾಗಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಎಷ್ಟು ಸಲ ಇಲ್ಲಿ ಈ ಬಗ್ಗೆ ಹೇಳುವುದು? ಯಾರ ಉಪಕಾರಕ್ಕೋಸ್ಕರ ಈ ರೀತಿ ಹೇಳುವುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಪ್ರತಿ ಬಾರಿ ಸದನದಲ್ಲಿ ಮಂತ್ರಿಗಳು ಗೈರು ಹಾಜರಿಯ ಬಗ್ಗೆ ಪ್ರಸ್ತಾಪವಾದಾಗ ತಾವು ವಿಧಾನಪರಿಷತ್ತಿನಲ್ಲಿದ್ದಾರೆ ಎಂಬ ಉತ್ತರವನ್ನು ಸದಸ್ಯರು ನೀಡುತ್ತಿದ್ದರು. ಆದರೆ ಇವತ್ತು ವಿಧಾನ ಪರಿಷತ್ತು ಕೂಡ ಸಮಾವೇಶಗೊಂಡಿಲ್ಲವಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸದಸ್ಯರು ಹೇಳುವುದು ನಿಜ. ಇವತ್ತು ವಿಧಾನ ಪರಿಷತ್ತು ಸಮಾವೇಶಗೊಂಡಿಲ್ಲ. ಮಂತ್ರಿಗಳು ಎಲ್ಲಿದ್ದಾರೆ ಎಂದು ಭಾವಿಸೋಣ. ನಿದ್ರೆ ಮಾಡುತ್ತಿದ್ದಾರೆ ಎಂದು ಭಾವಿಸೋಣವೇ ಅಥವಾ ಇನ್ನು ಎಚ್ಚರವಾಗಿಲ್ಲವೆಂದು ಭಾವಿಸೋಣವೇ. ನಾವು ಇಲ್ಲಿ ಚರ್ಚೆ ಮಾಡಿ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯೋಣ ಎನ್ನತಕ್ಕಂತಹ ದೃಷ್ಟಿಯಿಂದ ಜನರ ಪರವಾಗಿ ವಾದ ಮಾಡಲಿಕ್ಕಾಗಿ ಎಲ್ಲರೂ ಸದನಕ್ಕೆ ಬಂದಿರುತ್ತೇವೆ. ಬೇಡಿಕೆಗಳ ಮೇಲೆಯೂ ಕೂಡ ಅನೇಕ ಸದಸ್ಯರು ಚರ್ಚೆ ಮಾಡಲಿಕ್ಕೆ ತಯಾರು ಮಾಡಿಕೊಂಡು ಬಂದಿರುತ್ತಾರೆ. ಇವರು ಯಾವುದೇ ರೀತಿಯಲ್ಲಿ ಸ್ಪಂದಿಸಲಿಲ್ಲ, ಇವರು ಕೇಳಲಿಲ್ಲ ಎಂದರೆ ನಾವು ಯಾರಿಗೆ ಹೇಳುವುದು. ನೀವು ಏನು

ಪದೇ ಪದೇ ಛೀಮಾರಿ ಹಾಕುತ್ತಿದ್ದೀರಲ್ಲ ಅದರ ಪರಿಣಾಮ ಇಲ್ಲಿ ಬೀರುತ್ತಾ ಇಲ್ಲ ಎಂಬುದು ಇದರ ಅರ್ಥ. ತಮ್ಮ ಭಯವೂ ಕೂಡ ಅವರಿಗೆ ಹೊರಟು ಹೋಗಿದೆ.

ಶ್ರೀ ಡಿ.ವಿ. ಸದಾನಂದಗೌಡ : ನಿನ್ನೆ ತಾನೇ ಕಾಂಗ್ರೆಸಿಗೆ ದಳದವರು ಸಪೋರ್ಟ್ ಮಾಡಿದ್ದರಿಂದ ಒಂದು ಸೀಟು ಕಾಂಗ್ರೆಸ್‌ಗೆ ಬಂದಿದೆ. ಹೀಗಿರುವಾಗ ಇವತ್ತಾದರೂ ವಿರೋಧಪಕ್ಷದನಾಯಕರು ಆಡಳಿತ ಪಕ್ಷದ ಬಗ್ಗೆ ಮಾತನಾಡದೆ ಕುಳಿತು ಕೊಳ್ಳಬಾರದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೇವಲ 36 ಸೀಟುಗಳನ್ನು ಇಟ್ಟುಕೊಂಡು ನಮಗೆ ಬುದ್ಧಿ ಹೇಳುವುದಕ್ಕೆ ಬರುತ್ತೀರಲ್ಲ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇವರು ಯಾರ ಜೊತೆ ಯಾವ ಸಂದರ್ಭದಲ್ಲಿ ಇರುತ್ತಾರೆಂದು ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಅವರನ್ನು ಕರೆಯಿಸಬೇಕು, ಅವರಿಗೆ ಹೇಳಬೇಕು, ಛೀಮಾರಿ ಹಾಕಬೇಕು. ಇಲ್ಲದಿದ್ದರೆ ಇದೇ ರೀತಿ ನಡೆಯುತ್ತದೆ. ನಾವು ಎಷ್ಟು ಸಾರಿ ಎಂದು ಹೇಳುವುದು? ನಿಜವಾಗಿ ನಿಮ್ಮ ಭಯ ಕೂಡ ಹೊರಟು ಹೋಗಿದೆ. ನಮ್ಮ ಭಯ ಹೊರಟುಹೋಗಿದೆ. ಪತ್ರಿಕೆಯಲ್ಲಿ ಬಂದರೆ ಅದನ್ನೂ ಕೂಡ ಅವರು ಕೇರ್ ಮಾಡುವುದಿಲ್ಲ. ಹೀಗಾಗಿ ಅವರಿಗೆ ಯಾರದ್ದೂ ಭಯ ಇಲ್ಲದಂತಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇಷ್ಟು ದಿನ ವಿರೋಧ ಪಕ್ಷದವರು ಗಲಾಟೆ ಮಾಡುತ್ತಾರೆಂಬುದಕ್ಕಾದರೂ ಹೊತ್ತಿಗೆ ಮುಂಚೆ ಬಂದು ಕುಳಿತುಕೊಳ್ಳುತ್ತಿದ್ದರು. ಪತ್ರಿಕೆಯವರು ಸಾಕಷ್ಟು ಬರೆದರು. ವಿರೋಧ ಪಕ್ಷದವರು ಗಲಾಟೆ ಮಾಡಿದರು, ಆಗ ಸ್ವಲ್ಪ ಅವಮಾನವಾಗುತ್ತದೆಂದು ಅಂದುಕೊಳ್ಳುತ್ತಿದ್ದರು. ಅದಾದನಂತರ ತಾವು ಸ್ವಲ್ಪ ವಾರ್ನ್ ಮಾಡುವುದಕ್ಕೆ ಶುರು ಮಾಡಿದಿರಿ. ನೀವು ವಾರ್ನ್ ಮಾಡುವುದಕ್ಕೆ ಶುರು ಮಾಡಿದ ಮೇಲೆ ಸ್ವಲ್ಪ ಒಂದು ರೂಪಕ್ಕೆ ಬಂತು. ಆಮೇಲೆ ಮಾನ್ಯ ಮುಖ್ಯಮಂತ್ರಿಗಳ ಮೇಲೆ ನಿಮ್ಮ ಮೇಲೆ ಹೇಳುವುದಕ್ಕೆ ಶುರು ಮಾಡಿದ ಮೇಲೆ, ನಿಮ್ಮ ಮೇಲೆ ಕೂಡ ಭಯ ಹೊರಟು ಹೋಯಿತು. ಈಗ ಯಾರ ಭಯ ಅವರಿಗೆ? ಜನರ ಭಯ ಇದ್ದಿದ್ದರೆ ಇಷ್ಟು ಹೊತ್ತಿಗೆ ಬಾರದೆ ಇರುತ್ತಿರಲಿಲ್ಲ. ಏಕೆಂದರೆ ಈ ತೀರ್ಮಾನಕ್ಕೆ ಜನರು ಬೆಂಬಲ ಕೊಡುವುದಿಲ್ಲ ಎಂದು ಬರುತ್ತಿದ್ದರು. ಹೀಗಾಗಿ ಜನರ ಭಯವೂ ಇಲ್ಲ. ಈ ಸಂದರ್ಭದಲ್ಲಿ ನಾವು ಏನು ಮಾಡಬೇಕೆಂದು ತಾವು ಹೇಳಿದರೆ ಆ ದಿಕ್ಕಿನಲ್ಲಿ ಹೋಗುತ್ತೇವೆ. ಏಕೆಂದರೆ ಇವತ್ತು ಶನಿವಾರ. ವಿಶೇಷವಾಗಿ 4 ಮತ್ತು 5 ರಂದು ರಜೆ ಕೊಟ್ಟದ್ದಕ್ಕೋಸ್ಕರ ಈ ಶನಿವಾರ ಮತ್ತು ಮುಂದಿನ ಶನಿವಾರ ವಿಶೇಷವಾಗಿ ಅಧಿವೇಶನ ಕರೆದಿರುವುದು. ಇಂಥ ಸಂದರ್ಭದಲ್ಲಿ ಇದರ ಬಗ್ಗೆ ಸರ್ಕಾರಕ್ಕೆ ಸೀರಿಯಸ್‌ನೆಸ್ ಇಲ್ಲವೆಂದರೆ ನಾವು ಎಲ್ಲಿ ಕೂಗೋಣ, ಯಾರ ಹತ್ತಿರ ಚೀರೋಣ, ನಾವು ಏನು ಮಾಡಬೇಕು?

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಕೇಳೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ಅದೇ ಉತ್ತರ ಕೊಡುತ್ತಾರೆ. ಹೊಸ ಉತ್ತರ ಏನು ಅವರು ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : 9 ಜನ ಶಾಸಕರು, 10 ಜನ ಮಂತ್ರಿಗಳು, ಒಟ್ಟು 19 ಜನರಿದ್ದಾರೆ ಇಲ್ಲಿ. ತಮ್ಮಲ್ಲಿ ಒಂದು ಮನವಿ ಮಾಡುತ್ತೇನೆ, ಇವತ್ತು ಈ ಸಭೆಯನ್ನು ಮುಂದೂಡಿ ನೋಡೋಣ. ಏಕೆಂದರೆ ಇವರು ಸಭೆಗೆ ಬಾರದಿರತಕ್ಕ ದೃಷ್ಟಿಯಿಂದ ಇವತ್ತು ಈ ಸಭೆಯನ್ನು ಮುಂದೂಡಿದೆ ಎಂದು ತಾವು ಹೇಳಿ; ಇದರಿಂದ ಒಂದು ಇತಿಹಾಸ ನಿರ್ಮಾಣವಾಗಲಿ. ಆಡಳಿತ ಪಕ್ಷದವರು ಬೇಜವಾಬ್ದಾರಿಯಿಂದ ಈ ಸದನಕ್ಕೆ ಗೈರು ಹಾಜರಾಗಿದ್ದಾರೆ, ಈ ಸದನವನ್ನು ಕಡೆಗಾಣಿಸಿದ್ದಾರೆಂದು ತಾವು ದಯಮಾಡಿ ಇವತ್ತು ಒಂದು ಸಾರಿ ಭದ್ರವಾಗಿ ನಿಂತು ಹೇಳಿ. ಸದನ ಮುಂದೆ ಹೋಗಲಿ.

ಅಧ್ಯಕ್ಷರು : ಇವತ್ತು ತಮ್ಮ ಕಾರ್ಯಕ್ರಮ ಬೇರೆ ಏನೂ ಇಲ್ಲತ್ತಾನೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇರೆ ಕಾರ್ಯಕ್ರಮಕ್ಕಿಂತ ಇವತ್ತು ಇಲ್ಲಿ ಈ ಬಿಲ್ ಬಂತು. ಇದನ್ನು ಚರ್ಚೆ ಇಲ್ಲದೆ ಪಾಸ್ ಮಾಡಿಕೊಡುವುದಕ್ಕಾಗುತ್ತದೆಯೇ? ಅದನ್ನು ನಾವು ಯಾವಾಗ ಬೇಕಾದರೂ ಬೀಳಿಸಬಹುದು, ಆಗ ನೀವು ಏನು ಅನ್ನುತ್ತೀರಿ? ನಾವು ಜನರಿಗೆ ಬೇಕಾದಂತಹ ಕಾನೂನುಗಳು ಇರುತ್ತವೆಂದು ಸುಮ್ಮನಿರುತ್ತೇವೆ. ಅಂದರೆ ಅದರ ಅರ್ಥವೇನು?

ಶ್ರೀ ವಾಟಾಳ್ ನಾಗರಾಜ್ : ಈಗ ಸಭೆಯ ಅಭಿಪ್ರಾಯ ಕೇಳಿ. ಸಭೆಯನ್ನು ಮುಂದೂಡೋಣವೆಂದು ಕೇಳಿ, ನಾವು ಸಂಪೂರ್ಣ ಬಹುಮತ ಕೊಡುತ್ತೇವೆ. ಅದರಲ್ಲಿ ಏನು ಅನುಮಾನ ಇಲ್ಲ. ನಿಜವಾಗಿ ಇದು ಸರ್ಕಾರಕ್ಕೆ ಗೌರವ ತರತಕ್ಕದ್ದಲ್ಲ. ಇದು ಪ್ರಜಾತಂತ್ರ ವ್ಯವಸ್ಥೆಗೆ ಅಪಾಯಕಾರಿ ಬೆಳವಣಿಗೆ. ಈ ಸದನವನ್ನು ಇಷ್ಟೊಂದು ಕಡೆಗಾಣಿಸಬಾರದು.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳಿದ ಹಾಗೆ ಅವರಿಗೆ ಏನಾದರೂ ಒಂದು ಕಾರಣ ಇರುತ್ತದೆ. ವಿಧಾನ ಪರಿಷತ್ತಿಗೆ ಹೋಗಿದ್ದಾರೆಂದು ಹೇಳುವುದಕ್ಕೆ ವಿಧಾನಪರಿಷತ್ತಿಗೆ ಇವತ್ತು ರಜೆ. ಇಂಥ ಸ್ಥಿತಿಯಲ್ಲಿ ಏನು ಮಾಡಬೇಕೆಂದು ಗೊತ್ತಿಲ್ಲ. ನೇರವಾಗಿ ನೀವು ಛೀಮಾರಿ ಹಾಕಿ, ಇಲ್ಲದಿದ್ದರೆ ದಯವಿಟ್ಟು ಸಭೆಯನ್ನು ಮುಂದೂಡಿ. ಇನ್ನೇನು ಬೇರೆ ದಾರಿ ಕಾಣುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಏತಕ್ಕೆ ಛೀಮಾರಿ ಹಾಕುವುದಕ್ಕೆ ಹಿಂದುಮುಂದು ನೋಡುತ್ತಿದ್ದೀರಿ? ತಮ್ಮ ಮನಸ್ಸಿನಲ್ಲಿ ಏನು ದುಗುಡ ಇದೆ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮತ್ತೆ ಮುಖ್ಯಮಂತ್ರಿಗಳ ಹತ್ತಿರ ಹೋಗುತ್ತಾರೆಂದು ಭಯವೆ?

ಅಧ್ಯಕ್ಷರು : ನಾನು ನೆಮ್ಮದಿಯಿಂದ ಇರುವುದು ನಿಮಗೆ ಇಷ್ಟವಿಲ್ಲವೆ?

ಶ್ರೀ ವಾಟಾಳ್ ನಾಗರಾಜ್ : ತಮಗೆ ಗೊತ್ತಿದೆ, ನನ್ನ ಬಗ್ಗೆ ಅನುಮಾನ ಪಡುವುದಕ್ಕೆ ಹೋಗಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ನಮ್ಮ ದಿಯಿಂದ ಇಲ್ಲ. ಅದು ಕೂಡ ನಮಗೆ ಗೊತ್ತು.

ಶ್ರೀ ಸಿ. ಬೈರೇಗೌಡ : ಸಾಮಾನ್ಯವಾಗಿ ನಮ್ಮ ರೂಢಿ ಪ್ರಕಾರ ಶನಿವಾರ ಭಾನುವಾರ ರಜೆ ಇರುತ್ತಿತ್ತು. ಆದುದರಿಂದ ಅನೇಕ ಜನ ಸದಸ್ಯರು ಮತ್ತು ಮಂತ್ರಿಗಳು ಅವರವರ ಕ್ಷೇತ್ರಗಳಲ್ಲಿ ಮತ್ತು ಅವರವರ ಜಿಲ್ಲೆಗಳಲ್ಲಿ ಕಾರ್ಯಕ್ರಮ ಇರುವುದರಿಂದ ಅಲ್ಲಿಗೆ ಹೋಗಿದ್ದಾರೆ. ಆ ಕಾರಣದಿಂದ ಇವತ್ತಿನ ದಿವಸ ನಮ್ಮ ಹಾಜರಾತಿ ಸ್ವಲ್ಪ ತೆಳುವಾಗಿದೆ. ನಾವು ಅದನ್ನು ಒಪ್ಪುತ್ತೇವೆ. ಸಭೆಯಲ್ಲಿ ನಡೆಯತಕ್ಕ ಕಾರ್ಯಕಲಾಪಗಳಿಗೆ ನಿಯಮಾವಳಿ ಪ್ರಕಾರ ಕೋರಂ ಇರುವುದರಿಂದ ತಾವು ದಯವಿಟ್ಟು ಸಭೆಯನ್ನು ಮುಂದುವರಿಸಿಕೊಂಡು ಹೋಗಬೇಕೆಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಶ್ರೀ ವಾಟಾಳ್ ನಾಗರಾಜ್ ಅವರು ಮತ್ತು ನಾವು ಮಾತನಾಡಿ ವಿರೋಧ ಪಕ್ಷದವರು ಏನು ಮಾಡಬೇಕೆಂದು ಯೋಚನೆ ಮಾಡುತ್ತೇವೆ. ಸರ್ಕಾರದಲ್ಲಿ ಅವರು ಒಗ್ಗಟ್ಟಾಗಿ ಇಲ್ಲ. ಒಗ್ಗಟ್ಟಾಗಿ ಯೋಚನೆ ಮಾಡುವುದಕ್ಕೆ ಅಥವಾ ಚರ್ಚೆ ಮಾಡುವುದಕ್ಕೆ ಅಥವಾ ತೀರ್ಮಾನ ಮಾಡುವುದಕ್ಕೆ ಅವರಲ್ಲಿ ಆ ಒಂದು ವ್ಯವಸ್ಥೆ ಇಲ್ಲ. ಅವರು ಒಟ್ಟಾಗಿ, ಒಗ್ಗಟ್ಟಾಗಿ ಇದ್ದಿದ್ದರೆ ನಮಗೆ ಏನೋ ಅನ್ನಿಸುತ್ತಿತ್ತು. ನಿನ್ನೆ ಒಂದೇ ಅವರು ಒಟ್ಟಾಗಿ ತೀರ್ಮಾನ ಮಾಡಿದ್ದು ಅಂದರೆ 119 ಜನ ಸೇರಿಕೊಂಡು ಕಾಂಗ್ರೆಸ್‌ನವರನ್ನು ಗೆಲ್ಲಿಸಿದರು. ಅದು ಬಿಟ್ಟರೆ, ಇವತ್ತಿನವರೆಗೆ ಅವರು ಒಗ್ಗಟ್ಟಾಗಿದ್ದು ನೋಡಿಲ್ಲ. ಹಾಗಾಗಿ ನಾವು ಏನೋ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಬೈರೇಗೌಡರು ಹೇಳಿದ ಹಾಗೆ ಮಾನ್ಯ ನಾಗೇಗೌಡರು ಹೇಳುತ್ತಿದ್ದರು. ಏನೋ ಇವತ್ತು ಆಕಸ್ಮಿಕವಾಗಿ ಸೇರಿ ಬಿಟ್ಟಿದ್ದೇವೆ, ಕೆಲವರು ಊರಿಗೆ ಹೋಗಿದ್ದಾರೆಂದು ಹೇಳುತ್ತಿದ್ದಾರೆ. ಆದ್ದರಿಂದ ಇವತ್ತು ಸದನವನ್ನು ಮುಂದೂಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹೇಳಬೇಕಾಗುತ್ತದೆ. ಇವರ ಧೋರಣೆ, ಇವರ ನಡವಳಿಕೆ, ತಮ್ಮ ಮಾತಿಗೆ ಬೆಲೆ ಇಲ್ಲ, ನಮ್ಮ ಮಾತಿಗೆ ಬೆಲೆ ಇಲ್ಲ, ಜನರ ಕುಂದುಕೊರತೆಗಳು ಏನಿವೆ ಅವನ್ನು ಚರ್ಚೆ ಮಾಡುವುದಕ್ಕೆ ಕೂಡ ಅವರು ತಯಾರಿಲ್ಲ ಮತ್ತು ಯಾವ ಕಾರಣಕ್ಕೆ ಜನರು ಅವರನ್ನು ಆರಿಸಿ ಕಳುಹಿಸಿ ಸರ್ಕಾರವನ್ನು ರಚನೆ ಮಾಡಿದ್ದಾರೆ ಆ ಉದ್ದೇಶ ಇವತ್ತು ಪೂರ್ತಿಯಾಗಿಲ್ಲ. ಆದಕ್ಕಾಗಿ ಇವತ್ತು ಅವರ ಧೋರಣೆ ವಿರುದ್ಧ ಮತ್ತು ಅವರ ನಡವಳಿಕೆ ವಿರುದ್ಧ ನಾವು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇವೆ.

(ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ : ಸಭಾತ್ಯಾಗ ಮಾಡುವುದಕ್ಕೆ ಇದು ಏನು.....?

ಶ್ರೀ ಕೆ.ಎನ್ ನಾಗೇಗೌಡ : ಸಭೆ ನಡೆಸಬೇಕಾದರೆ ನಮ್ಮ ನಿಯಮಾವಳಿ ಇದೆ. ಆ ನಿಯಮಾವಳಿ ಪ್ರಕಾರ ಸಭೆ ನಡೆಯುವುದಕ್ಕೆ ತೊಂದರೆ ಇದ್ದರೆ ಸದನವನ್ನು ಮುಂದೂಡಿ. ನಿಯಮಾವಳಿ ಪ್ರಕಾರ ಈ ಸಭೆ ನಡೆಯಬೇಕಾದರೆ 23 ಜನ ಸದಸ್ಯರು ಇರಬೇಕೆಂದು ಇದೆ. ಆ ಪ್ರಕಾರ ಕೋರಂ ಇದೆ. ಎರಡನೆಯದಾಗಿ, ನಿಲುವಳಿ ಸೂಚನೆಯನ್ನು ಏನು ಕೊಟ್ಟಿದ್ದಾರೆ. ಆ ನಿಲುವಳಿ ಸೂಚನೆಗೆ ಉತ್ತರ

ಹೇಳುವುದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ. ತದನಂತರ ಇಲಾಖಾ ಬೇಡಿಕೆಗಳ ಚರ್ಚೆಗೆ ಉತ್ತರ ಹೇಳುವುದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ. ಈ ಸಭೆ ನಡೆಯುವುದಕ್ಕೆ ನಿಯಮಾವಳಿಗೆ ವಿರುದ್ಧ ಇದ್ದರೆ ತಾವು ಸದನವನ್ನು ಮುಂದೂಡಿ. ನಿಯಮಾವಳಿಗೆ ವಿರುದ್ಧ ಇಲ್ಲದೆ, ಅವರು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇವೆಂದು ಹೇಳತಕ್ಕ ಮಾತುಗಳು ಏನಿವೆ ಇವೆಲ್ಲ ನಿಯಮಾವಳಿಗೆ ಮಾಡಿರತಕ್ಕ ದ್ರೋಹ.

ಶ್ರೀ ವಾಟಾಳ್ ನಾಗರಾಜ್ : ಚೆನ್ನಾಗಿದೆ, ಚೆನ್ನಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಿಯಮಾವಳಿಗೆ ನಾವು ವಿರೋಧ ಪಕ್ಷದವರು ದ್ರೋಹ ಮಾಡುತ್ತಿದ್ದರೆ ರಾಜ್ಯದ ಜನರು ನಮಗೆ ಶಿಕ್ಷೆ ಕೊಡಲಿ. ಇವತ್ತು ಚರ್ಚೆಯಾಗಬೇಕಾಗಿರುವ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳಾದ ಶ್ರೀ ನಿಂಗಯ್ಯನವರು ಇಲ್ಲ, ಜಯಕುಮಾರ್ ಅವರು ಇಲ್ಲ. ಇಬ್ಬರೂ ಮಂತ್ರಿಗಳು ಇಲ್ಲ. ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ಮಾಡಬೇಕಾದರೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಇದು ನಿಯಮಾವಳಿಯೆ? ನೀವು ಹಿರಿಯ ನಾಯಕರು. ನೀವು ಸರಿ ಇದೆ ಎಂದರೆ, ನಾನು ನಿಮಗಿಂತ ಚಿಕ್ಕವನು.

ಶ್ರೀ ಕೆ.ಎನ್. ನಾಗೇಗೌಡ : ಮೊದಲು ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡುತ್ತಾರೆ, ಅದಕ್ಕೆ ಉತ್ತರ ಹೇಳಲು ನಾನು ಇದ್ದೇನೆ. ನಂತರ ವಿಧೇಯಕ ತದನಂತರ ಮುಖ್ಯ ಚರ್ಚೆ ಇಲಾಖಾ ಬೇಡಿಕೆಗಳು, ಅಷ್ಟು ಹೊತ್ತಿಗೆ ಶ್ರೀ ಜಯಕುಮಾರ್ ಮತ್ತು ಶ್ರೀ ನಿಂಗಯ್ಯನವರು ಇದ್ದಾರೆ, ಬರುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಯಾರದ್ದು ಬಿಸಿನೆಸ್ ಇದೆ ಅವರು ಮಾತ್ರ ಇರಲಿ, ಉಳಿದವರು ಹೊರಗಡೆ ಹೋಗಲಿ, ಎಲ್ಲರೂ ಹೌಸ್‌ನಲ್ಲಿ ಏತಕ್ಕೆ ಕುಳಿತುಕೊಳ್ಳಬೇಕು?

ಶ್ರೀ ವಾಟಾಳ್ ನಾಗರಾಜ್ : ಈ ಸದನ ಇರುವುದು ಅವರ ಇಚ್ಛೆ ಬಂದಾಗ ಬರುವುದಕ್ಕೆ, ಅವರು ಯಾವಾಗ ಬೇಕಾದರೆ ಬರಬಹುದು, ಅವರ ಬೇಡಿಕೆ ಇದ್ದಾಗ ಬರುವುದು, ಮತ್ತೆ ಇನ್ನೊಬ್ಬರ ಬೇಡಿಕೆ ಬಂದಾಗ ಹೊರಟುಹೋಗುವುದು. ಗಮನ ಸೆಳೆಯುವ ಸೂಚನೆ ಇದ್ದರೆ ಬರುವುದು ಅನಂತರ ಹೊರಟು ಹೋಗುವುದು. ಈ ರೀತಿ, ಈ ಸದನಕ್ಕೆ ಅಪಚಾರ ಮಾಡುತ್ತಿದ್ದಾರೆ, ಈ ಸದನಕ್ಕೆ ಅಗೌರವ ಮಾಡುತ್ತಿದ್ದಾರೆ, ಸದನಕ್ಕೆ ಕೊಡಬೇಕಾದ ಬೆಲೆಯನ್ನು ಸರ್ಕಾರ ಕೊಡುತ್ತಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಯಾರು ಉತ್ತರ ಕೊಡುತ್ತಾರೆ ಅವರು ಒಬ್ಬರು ಇರಲಿ, ನಾವು ಯಾರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ ಅವರು ಒಬ್ಬರು ಇರುತ್ತೇವೆ. ಇಬ್ಬರು ಇದ್ದರೆ ಸಾಕು. ಹೀಗಾದರೆ, 224 ಜನ ಇರತಕ್ಕ ವಿಧಾನಸಭೆ ಏತಕ್ಕೆ ಇರಬೇಕು? ಅಷ್ಟಾದರೂ ಮಾಡಿ. ಸರ್ಕಾರದ ಈ ಜನ ದ್ರೋಹಿ ನೀತಿಯನ್ನು ಪ್ರತಿಭಟನೆ ಮಾಡಿ ನಾವೆಲ್ಲರೂ ಸಭಾತ್ಯಾಗ ಮಾಡುತ್ತೇವೆ. ಇನ್ನು ಮುಂದೆ ಎಂದೂ ಕೂಡ ಈ ರೀತಿ ಆಗಬಾರದು ಎಂದು ಅವರು ಕ್ಷಮೆ ಕೇಳಬೇಕು.

(ಬಿಜೆಪಿ ಯ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ : ಇದು ಕೋರಂ ಪ್ರಶ್ನೆ ಅಲ್ಲ. ಸದನದ ನಿಯಮಾವಳಿ ಪ್ರಕಾರ ಕೋರಂ ಇರುವುದರಿಂದ ಸದನ ನಡೆಸುವುದಕ್ಕೆ ಅವಕಾಶ ಇದೆ. ಆದರೆ ಈ ಸದನದಲ್ಲಿ ಆಡಳಿತ

ನಡೆಸತಕ್ಕ ಪಕ್ಷದವರು, ಮಂತ್ರಿಗಳು, ಶಾಸಕರು ಎಷ್ಟು ಮಂದಿ ಹಾಜರಿರಬೇಕಾಗಿತ್ತು, ಈ ಸದನಕ್ಕೆ ಎಷ್ಟು ಗೌರವ ಕೊಡಬೇಕಾಗಿತ್ತು ಅದನ್ನು ಕೊಡುತ್ತಿಲ್ಲ. ಸುಮ್ಮನೆ ತಾಂತ್ರಿಕವಾಗಿ ನಾವು ಅದನ್ನು ಮಾಡುತ್ತೇವೆ ಇದನ್ನು ಮಾಡುತ್ತೇವೆಂದು ಮಾತನಾಡತಕ್ಕ ನಮ್ಮ ಮಾನ್ಯ ನಾಗೇಗೌಡರ ವಾದ ಏನಿದೆ ಇದು ನಿಜವಾಗಿ ಪ್ರಜಾತಂತ್ರದ ವ್ಯವಸ್ಥೆಗೆ ಅಪಾಯಕಾರಿ ಬೆಳವಣಿಗೆ. ಆ ಕಡೆ ಖಾಲಿ ಕುರ್ಚಿಗಳನ್ನು ನೋಡಿ; ಇದು ನಿಮಗೆ ನಿಜವಾಗಿ ಗೌರವ ಬರುತ್ತದೆಯೇ? 9-10 ಜನ ಮಂತ್ರಿಗಳಿದ್ದೀರಿ, 12 ಜನ ಶಾಸಕರು ಇದ್ದಾರೆ. ನೀವು ಸ್ವಲ್ಪ ತಿರುಗಿ ಆ ಕಡೆ ದೃಶ್ಯ ನೋಡಿ. ಆಡಳಿತ ಪಕ್ಷದ ಪ್ರೇತ ಕಳೆ ನೋಡಿ. ಕಳೆ ಇದೆಯೇ ಅಲ್ಲಿ? ಸದಸ್ಯರಿದ್ದಾರೆಯೇ? ಎಲ್ಲಿದ್ದಾರೆ, ಬರೀ ಖಾಲಿ ಕುರ್ಚಿಗಳು. ನಾಚಿಕೆಯಾಗುತ್ತದೆ, ಇದು ಒಳ್ಳೆಯದಲ್ಲ. ಆದ್ದರಿಂದ, ನಾವು ಕೂಡ ಸಭಾತ್ಯಾಗ ಮಾಡುತ್ತೇವೆ.

(ಶ್ರೀ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ನಾವು ಕೂಡ ಸಭಾತ್ಯಾಗ ಮಾಡುತ್ತಿದ್ದೇವೆ.

(ಶ್ರೀ ಪುಟ್ಟಣ್ಣಯ್ಯನವರು ಮತ್ತು ಶ್ರೀ ಶ್ರೀರಾಮ ರೆಡ್ಡಿಯವರು ಸಭಾತ್ಯಾಗ ಮಾಡಿದರು).

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಮಾನ್ಯ ನಂಜೇಗೌಡರು ಹೇಳುತ್ತಿದ್ದರು, ಮಾನ್ಯ ವಾಟಾಳ್ ನಾಗರಾಜ್‌ರವರು ಹೊರಗಡೆ ಹೋದಾಗ ಏನೋ ಹೇಳಿದರು ಎಂದು ಎಲ್ಲರೂ ವಾಪಸ್ಸು ಬರುತ್ತಿದ್ದಾರೆ ಏನೂ ಕೆಲಸ ಇಲ್ಲವೆಂದು ಕಾಣುತ್ತದೆ ಬರಲಿ ಸಂತೋಷ.

ಅಧ್ಯಕ್ಷರು : ಎಲ್ಲರೂ ಮತ್ತೆ ವಾಪಸ್ಸು ಬರುತ್ತಾರೆ, ಬಂದರು ನೋಡಿ.

(ಸಭಾತ್ಯಾಗ ಮಾಡಿದ ಕಾಂಗ್ರೆಸ್ ಮತ್ತು ಭಾರತೀಯ ಜನತಾ ಪಕ್ಷದ ಸದಸ್ಯರುಗಳು ವಾಪಸ್ಸು ಬಂದರು)

ಶ್ರೀ ಬಿ.ಎ. ಮೊಹಿದ್ದೀನ್ : ಮುಂದೆ ಪ್ರಚಾರ ಸಿಗದಿದ್ದರೆ ಇವರು ವಾಕ್‌ಔಟ್ ಮಾಡುವುದಿಲ್ಲ

ಶ್ರೀ ಕಾಗೋಡು ತಿಮ್ಮಪ್ಪ : ಕಾಲು ಕೆರೆದು ಮೈಮೇಲೆ ಹಾಕಿಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ ಬಹಳ ಮುಖ್ಯವಾದ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು : ಸಣ್ಣ ವಿಷಯಗಳು ಎರಡು ಮೂರು ಇವೆ ಅವುಗಳನ್ನು ಮುಗಿಸಿಬಿಟ್ಟು ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಂದಾಜು ಸಮಿತಿ ವರದಿ ಕೊಟ್ಟಮೇಲೆ ಕೃಷ್ಣಾ ಮೇಲ್ದಂಡೆ ಯೋಜನೆಯ ಕೆಲಸ ನಿಂತಿದೆ. ಅದರ ಬಗ್ಗೆ ಚರ್ಚೆ ಮಾಡಬೇಕಾಗಿದೆ.

MR. SPEAKER : We will take it up for discussion. ಬಿಸಿನೆಸ್ ಏನಿದೆ ಅದನ್ನು ಸ್ವಲ್ಪ ಸಮಯದಲ್ಲಿ ಮುಗಿಸೋಣ. ಆಮೇಲೆ ಅದನ್ನು ತೆಗೆದುಕೊಳ್ಳೋಣ.